ಕರ್ನಾಟಕ ರಾಜ್ಯದ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಆಶ್ರಯ ಯೋಜನೆಯಲ್ಲಿ ಆಗಿರತಕ್ಕ ಕೆಲಸಗಳನ್ನು ನಾವು ಚರ್ಚೆ ಮಾಡಬೇಕಾಗಿದೆ. ಈಗ ನಾನು ಮಾನ್ಯ ಸದಸ್ಯರುಗಳನ್ನು ಕೇಳುವುದು ಇಷ್ಟೇನೆ. ಇವೆಲ್ಲಾ ಬಹಳ ಮುಖ್ಯವಾದ ವಿಷಯಗಳು ಇವೆ, ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಈ ವಿಷಯಗಳನ್ನು ನಾವು ಈವಾಗ ಚರ್ಚೆ ಮಾಡಲಿಕ್ಕೆ ಸಹಕಾರ ಕೊಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಈಗ ಅವರೆಲ್ಲ ತಮ್ಮ ತಮ್ಮ ಸ್ಥಾನಗಳಿಗೆ ಮೊದಲು ಹೋಗಲಿ. ಈಗ ಮಾನ್ಯ ಮುಖ್ಯಮಂತ್ರಿಗಳೂ ಸಹ ತಮ್ಮ ವಿಷಯಗಳ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ರೆವಿನ್ಯೂ ಮಂತ್ರಿಗಳು ಸಹ ಪ್ರಸ್ತಾಪ ಮಾಡಿದ್ದಾರೆ; ತಾವೆಲ್ಲ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಶಾಸನಾತ್ಮಕವಾದ ನಿರ್ಣಯದ ಬಗ್ಗೆ ಮಂಡಿಸಬೇಕು.

ಶ್ರೀ ಹೆಚ್. ಏಕಾಂತಯ್ಯ:– ಈ ಶಾಸನಾತ್ಮಕ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ತಾವು ಇವತ್ತಿನ ದಿವಸ ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಗೊತ್ತು ಪಡಿಸಿದ್ದೀರಿ.

ಶ್ರೀ ಸಿ. ಬೈರೇಗೌಡ:– ಈಗಾಗಲೇ ಆರೂವರೆ ಗಂಟೆ ಆಗಿದೆ. 11 ಗಂಟೆಯಿಂದ ಕುಳಿತಿದ್ದೇವೆ. ಈ ವಿಚಾರವನ್ನು ನಾವು ನಾಳೆಗೆ ತೆಗೆದುಕೊಳ್ಳಬಹುದು.

ಶ್ರೀ ಆರ್.ವಿ. ದೇಶಪಾಂಡೆ:– ನಾಳೆ ನಮಗೆ ಆಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ನನಗೆ ಹೇಳಲಿಕ್ಕೆ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು:– ಹೇಳಿ, ತಾವು ಹೇಳಬೇಡಿ ಎಂದು ಹೇಳಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ನಾನೇನು ಮಾನ್ಯ ಬೈರೇಗೌಡರಿಗೆ ಅಡ್ಡಿ ಬಂದಿಲ್ಲ ಈಗ ತಾವು ಈ ದಿವಸವನ್ನು ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಗೊತ್ತು ಪಡಿಸಿದ್ದೀರಿ. ನಮ್ಮ ಸಭಾ ನಿಯಮದಂತೆ ಕೊನೆಯ ಎರಡೂವರೆ ಗಂಟೆಗಳನ್ನು ಈ ವಿಷಯದ ಚರ್ಚೆ ಬಗ್ಗೆ ಮೀಸಲಿಡಬೇಕಾಗಿದೆ. ಮೊದಲನೆಯದಾಗಿ ನಾವು ಇನ್ನೂ ಎಷ್ಟು ಗಂಟೆಗಳ ಕಾಲ ನಾವು ಕುಳಿತುಕೊಳ್ಳಬೇಕು ಎಂದು ತಾವು ತೀರ್ಮಾನ ಮಾಡಬೇಕು. ಆ ತೀರ್ಮಾನ ಮಾಡಿ ಆದಕ್ಕಿಂತ ಮುಂಚೆ ಎರಡೂವರೆ ಗಂಟೆಗಳು ಇದ್ದ ಹಾಗೆ ಈ ನಿರ್ಣಯ ಮತ್ತು ವಿಧೇಯಕಗಳನ್ನು ತಾವು ತೆಗೆದುಕೊಳ್ಳಬೇಕು, ಇದು ಒಂದು. ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಶಾಸನಾತ್ಮಕ ನಿರ್ಣಯದ ಬಗ್ಗೆ ವಿಷಯ ಪ್ರಸ್ತಾಪ ಮಾಡಲಿಕ್ಕೆ ಇಟ್ಟಿದ್ದಾರೆ, ಅದಕ್ಕೂ ನನ್ನ ಅಪೇಕ್ಷೆ ಇದೆ. ಮೊಟ್ಟ ಮೊದಲನೆಯದಾಗಿ ಇದು ಶಾಸನಾತ್ಮಕವಾದ ನಿರ್ಣಯವೇ ಅಥವಾ ಆಫಿಷಿಯಲ್ ರೆಸಲ್ಯೂಷನ್ನೆ ಅಥವಾ ಸರ್ಕಾರೀ ನಿರ್ಣಯವೇ? ಅದು ಒಂದು ತೀರ್ಮಾನ ಆಗಬೇಕು. ಏಕೆಂದರೆ ನಮ್ಮ ಸರ್ಕಾರದಲ್ಲಿ ತರ್ಜುಮೆ ಒಂದೇ ಇದೆ. ಒಂದು ಕಡೆವರು ಹೇಳುತ್ತಾರೆ, ಆಫಿಷಿಯಲ್ ರೆಸಲ್ಯೂಷನ್ ಎಂಬ ಮಾತನ್ನು ಹೇಳುತ್ತಾರೆ, ಕನ್ನಡದಲ್ಲಿ ಬಂದಾಗ ಶಾಸನಾತ್ಮಕವಾದ ನಿರ್ಣಯ ಎಂದು ಹೇಳುತ್ತಾರೆ. ಆ ಎರಡಕ್ಕೂ ವ್ಯತ್ಯಾಸ ಇದೆ ಎಂದು ನಾನು ಭಾವಿಸಿದ್ದೇನೆ. ಹಾಗಿದ್ದರೆ ಶಾಸನಾತ್ಮಕ ನಿರ್ಣಯ ಇದ್ದರೆ ಶಾಸನಾತ್ಮಕ ನಿರ್ಣಯವನ್ನು ಯಾವ ರೀತಿ ತರಬೇಕು ಎಂಬ ಬಗ್ಗೆ ನಮಗೆ ಒಂದು ಸಂಪ್ರದಾಯ ಇದೆ, ನಿಯಮಗಳು ಇದೆ. ಮೊಟ್ಟ ಮೊದಲನೆಯದಾಗಿ ಏನು ಶಾಸನಾತ್ಮಕವಾದ ನಿರ್ಣಯಗಳನ್ನು ತಂದಿದ್ದಾರೆ, ಬೇರೆ ನಿರ್ಣಯಗಳೊಪಾದಿಯಲ್ಲಿ ಅದು ಈ ಸಭೆಯ ಮುಂದೆ ಬರಬೇಕಾಗಿತ್ತು. ತಮ್ಮ ಗಮನಕ್ಕೆ ತರುವುದು ಏನೆಂದರೆ ಈ ಶಾಸನಾತ್ಮಕ ನಿರ್ಣಯವನ್ನು, ಅದಕ್ಕೆ ಬೇಕಾದಂತಹ, ಏನು ಕಾನೂನು ರೀತ್ಯ ಪ್ರತಿಯಾಗಲಿ, ಅಥವಾ ಯಾವುದೇ ರೀತಿಯ ಸಾಹಿತ್ಯ ಇದೆ. ಆ ಯಾವುದೇ ಸಾಹಿತ್ಯವನ್ನು ಒದಗಿಸದೇ ಇಲ್ಲಿ ಸಭೆಯ ಮುಂದೆ ಇಡಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದರ ಬಗ್ಗೆ ತಾವು

ಮೊದಲು ರೂಲಿಂಗ್ ಕೊಡಬೇಕು. ಅವರಿಗೆ ಇಷ್ಟ ಬಂದಾಗ ಈ ನಿರ್ಣಯವನ್ನು ತರುವುದು ಅಲ್ಲ. ಏತಕ್ಕೋಸ್ಕರ ತಂದಿದ್ದಾರೆ? ಒಂದು ಕೇಂದ್ರ ಸರ್ಕಾರದ ಕಾಯಿದೆಯನ್ನು ಸಂವಿಧಾನದ 252(1)ರ ಪ್ರಕಾರ ತಾವು ಅನುಮೋದನೆಗಾಗಿ ಅಥವಾ ಇಲ್ಲಿ ಅಡಾಪ್‌ಷನ್‌ಗೆ ಅದನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಅವಕಾಶ ಇರುವಂತಹ ಒಂದು ನಿರ್ಣಯವನ್ನು ತಾವು ತಂದಿದ್ದೀರಿ. ಆ ನಿರ್ಣಯವನ್ನು ತಾವು ತರುವಾಗ ಇಲ್ಲಿಯವರೆಗೆ ಏನು ನಿಯಮವನ್ನು ಪಾಲಿಸಿಕೊಂಡು ಬಂದಿದ್ದೇವೆ, ಆ ರೀತಿ ಸರ್ಕಾರ ಮಾಡಿಲ್ಲ. ಮೊದಲನೆಯದಾಗಿ ಯಾವ ಕಾಯ್ದೆಯನ್ನು ನಾವು ಅಡಾಪ್ಟ್ ಮಾಡಿಕೊಳ್ಳಬೇಕು ಎಂದು ಹೇಳುತ್ತೇವೆ, ಅದರ ಪ್ರತಿಯನ್ನು ಒದಗಿಸಬೇಕಾದ್ದು ಸರ್ಕಾರದ ಮತ್ತು ತಮ್ಮ ಕಾರ್ಯಾಲಯದ ಜವಾಬ್ದಾರಿ. ಇವತ್ತಿನ ದಿವಸ ಅದು ಆಗಿಲ್ಲ. ಅದಕ್ಕೆ ಬೇಕಾದಂಥ ಎಲ್ಲಾ ಸಾಹಿತ್ಯವನ್ನು ಸಹ ಅವರು ಕೊಡಬೇಕಾಗಿತ್ತು. ಇದು ಯಾವುದನ್ನು ಮಾಡದೇ ಇರುವುದರಿಂದ ಅದನ್ನು ಇವತ್ತಿನ ದಿವಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಾಗಲೀ, ಅಥವಾ ಸಂಸದೀಯ ಸಚಿವರೇನಾದರೂ ಇದನ್ನು ಓದಬೇಕು ಎಂದು ಹೇಳಿ ಅವರಿಗೆ ಅನಿಸಿದರೆ ಇದನ್ನು ಓದುತ್ತೇನೆ.

Section 587 of Practice and Procedure of Parliament by Kaul and Shekdhar.

> "The Speaker in consultation with the Leader of the House fixes a date for discussion of the resolution. Before inclusion of the resolution in the list of business, the Minister concerned ensures that all relevant documents and literature are circulated, where necessary, to members sufficiently in advance."

ನಾವು ಯಾವುದರ ಮೇಲೆ ಚರ್ಚೆ ಮಾಡಬೇಕು ಸನ್ಮಾನ್ಯ ಅಧ್ಯಕ್ಷಣಿಯವರೇ. ಎಲ್ಲಿದೆ? ನೀವು ಕೇವಲ ಒಂದು ನಿರ್ಣಯದ ಪ್ರತಿಯನ್ನೂ ಬುಲೆಟಿನಲ್ಲಿ ಹಾಕುವುದಲ್ಲ. ಅದಕ್ಕಿಂತ ಮೊದಲು ಸಂಬಂಧಪಟ್ಟಂಥ ಕಾಯ್ದೆಯನ್ನು ಸರ್ಕ್ಯುಲೇಟ್ ಮಾಡಬೇಕು. ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿದ್ದರೆ ಆ ಚರ್ಚೆ ಸಾಮಾನ್ಯವಾಗಿ ಅಲ್ಲಿ ಚರ್ಚೆಯಾದಂಥ ನಡವಳಿಕೆ ಏನು ಇದೆ, ಆ ನಡವಳಿಕೆಯ ಪ್ರತಿಯನ್ನು ಕಳುಹಿಸುವುದು ಸಂಪ್ರದಾಯವಾಗಿದೆ. ಇಲ್ಲಿ ಚರ್ಚೆ ಮಾಡುವಂಥ ಉದ್ದೇಶ ಏನೆಂದರೆ ಆ ಇಡೀ ಕಾನೂನು ಈ ರಾಜ್ಯದ ಶಾಸನಸಭೆ ಮಾಡಿದಂಥ ಕಾನೂನಾಗಿ ಪರಿಗಣಿಸಿ ಅದನ್ನು ಜಾರಿಗೆ ತರುವಂಥ ದೃಷ್ಟಿಯಿಂದ ಮಾಡಿದಂಥ ಕಾನೂನಾಗಿದೆ. ಒಂದು ಸಾರಿ ನಾವು ಆ ಕಾನೂನನ್ನು ಮಾಡಿದ ಮೇಲೆ ಆ ಕಾನೂನನ್ನು ತಿದ್ದುಪಡಿ ಮಾಡುವುದಾಗಲೀ ಅಥವಾ ಬೇರೆ ರೀತಿಯಲ್ಲಿ ರಿಪೀಲ್ ಮಾಡಲಿಕ್ಕಾಗಲೀ ಈ ಶಾಸನಸಭೆಗೆ ಅಧಿಕಾರವಿಲ್ಲ. ಆದ್ದರಿಂದ ಮುಂಚಿತವಾಗಿ ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾದಂಥ ಅವಶ್ಯಕತೆ ಇದೆ. ಅದಕ್ಕೆ ಬೇಕಾದಂಥ ಎಲ್ಲಾ ಮಾಹಿತಿಯನ್ನು ತಾವು ಕೊಡಲಿಕ್ಕೆ ಆದೇಶವನ್ನು ಮಾಡಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಸದಸ್ಯರು ಈಗ ಏನು ಖಾಸಗೀ ಕಾರ್ಯಕಲಾಪಗಳು ಇವತ್ತು ಅಜೆಂಡಾದಲ್ಲಿದೆ, ಅದನ್ನು ತೆಗೆದುಕೊಳ್ಳಬೇಕು, ಕೊನೆಯ ಎರಡೂವರೆ ಗಂಟೆ ಹೊತ್ತು ತೆಗೆದುಕೊಳ್ಳಬೇಕು ಎಂದು ಅವರು ಏನು ಹೇಳಿದ್ದಾರೆ ಅದಕ್ಕೆ ಸಭೆ ಒಪ್ಪಿದರೆ ಅದನ್ನು ಖಂಡಿತಾ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧ ಇದ್ದೇನೆ. ಈಗ ಖಾಸಗಿ ಕಾರ್ಯಕ್ರಮಗಳ ಬಗ್ಗೆ ಸಭೆ ಏನು ಹೇಳುತ್ತದೆ.

ಶ್ರೀ ಸಿ. ಬೈರೇಗೌಡ:– ನಾನು ಆಗಲೇ ಹೇಳಿದೆ. ಈಗಾಗಲೇ 6.40 ಗಂಟೆ ಆಗಿದೆ. ನಾವು ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕಾಗಿದೆ?

ಶ್ರೀ ಹೆಚ್. ಏಕಾಂತಯ್ಯ:- ನಾನು ಈಗಲೇ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುವುದಿಲ್ಲ.

ಉಪಾಧ್ಯಕ್ಷರು:- ನಾವು ಇವತ್ತಿನ ಅಜೆಂಡಾದಲ್ಲಿರುವುದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:- ಅಂಜೆಡಾದಲ್ಲಿದೆ. ಇವತ್ತು ಸಾಧ್ಯವಾಗಲಿಲ್ಲ ಎಂದು ತಮಗೆ ಅನಿಸಿದರೆ ಸಭೆ ಆದಕ್ಕೆ ಅನುಮತಿಯನ್ನು ಕೊಟ್ಟರೆ ಇದನ್ನು ನಾಳೆ ದಿವಸ ತೆಗೆದುಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ:- ನಾಳೆ ಸಭೆ ಹೇಗೂ ಸೇರುವುದು ಎಂದು ತೀರ್ಮಾನವಾಗಿದೆ. ಉಳಿದಿರತಕ್ಕಂಥದ್ದು ನಮ್ಮ ಕಾರ್ಯಸೂಚಿಯಲ್ಲಿ ಏನು ಇದೆ ಇರತಕ್ಕಂಥದ್ದನ್ನು ನಾಳೆ ತೆಗೆದುಕೊಳ್ಳೋಣ. ಖಾಸಗೀ ನಿರ್ಣಯವಾಗಬಹುದು ಅಥವಾ ನಿಮ್ಮ ಸ್ವ್ಯಾಚ್ಯುಟರಿ ರೆಸಲ್ಯೂಷನ್ ಆಗಬಹುದು, ಇರತಕ್ಕಂಥದ್ದೆಲ್ಲಾವನ್ನೂ ನಾಳೆ ತೆಗೆದುಕೊಳ್ಳೋಣ. ಎಷ್ಟು ಹೊತ್ತು ಎಂದು ಕುಳಿತಿರುವುದಕ್ಕಾಗುತ್ತದೆ. ದಯವಿಟ್ಟು ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಇವತ್ತಿನದನ್ನು ಚರ್ಚೆ ಮಾಡುವುದಕ್ಕೆ ಅವರದೇನು ಅಡ್ಡಿ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ಬಹಳ ಮಾತನಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ:- ಸಭೆಯನ್ನು ದಯವಿಟ್ಟು ನಾಳೆಗೆ ಮುಂದುವರಿಸಿ.

MADAM DEPUTY SPEAKER:- Now the House stands adjourned to meet tomorrow at 9-30 A.M.

(ಸದನವು 6-39 ಗಂಟೆಗೆ ಮುಗಿಯಿತು. ಮತ್ತೆ ಸಭೆಯನ್ನು ದಿನಾಂಕ: 13-1-93ರಂದು ಬೆಳಿಗ್ಗೆ 9-30 ಗಂಟೆಗೆ ಸೇರಲು ನಿಶ್ಚಯಿಸಿತು.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)